ಮಾವ ಇರ್ಬೇಕಂತ. ತಂದಿಲ್ಲದ ಮಕ್ಕಳು. ಅವನನ್ನ ಬಿಟ್ರ ಇನ್ಯಾರ ಬುದ್ಧಿಗಲಿಸಬೇಕು?' – ಅಂತ ನಾ ಗಟ್ಟಿಯಾಗಿದ್ದೆ... ಎಷ್ಟು ಎಷ್ಟೂಂತ ಗಟ್ಟಿಯಾಗಾಕಾದೀತು ಆಂ...

ಶಾಂಕರಿ, ಶಾಂಕರೂ, ಯವ್ವಾ, ಮಮ್ಮೀ... ಹಿಂಗ್ಯಾಕ ಇವ್ರೆಲ್ಲ ಅರಚ್ತಾರ ಅಂತ ಶಂಕರಿ ಎಚ್ಚರಾದಾಗಲೇ ಅವಳಿಗೆ ಗೊತ್ತಾಗಿದ್ದು, ಪಾತ್ರಿ ಪಗಡಿ ಕಟ್ತಾ ಏನೋ ಧೇನಿಸ್ತಾ ಕುಂತವಳು ಪ್ರಜ್ಞೆತಪ್ಪಿ ಒರಗಿಬಿಟ್ಟಿದ್ಲು. ಮೈ ತಪತಪ ಬೆವತಿತ್ತು. ಅಪ್ಪ, ಟಾವೆಲ್ಲಿನಲ್ಲಿ ಕಣ್ಣೊರೆಸಿಕೊಳ್ತಾ, 'ಶಾಂಕರಿ ನೀ ಹೀಂಗ ಮಾಡಿದ್ರ ನಾ ಯಾನ ಮಾಡ್ಲೀ ಯವ್ವಾ...' ಅಂದು ಉಸುರಾಕತಿದ್ದ. ಅಪ್ಪನ ಅಸಹಾಯಕ ದನಿ ಆಳಕ್ಕೆ ತಾಕಿತ್ತು. ಇಲ್ಲ. ನಾ ಇನ್ನು ಬ್ಯಾಸರ ಮಾಡ್ಕೊಣಾಳಿಲ್ಲ. ಅಪ್ಪನ ಉಳಿಸ್ಕಾಬೇಕು. ಅವ್ವ ಎಂದೋ ಎತ್ತೋ? ಆಕಿ ಮಣ್ಣು ಸುರಳೀತ ಆಗ್ಬೇಕು. ಎರ್ಡ ಹೆಣ್ಣ ಹೆತ್ತೀನಿ. ಅರ್ಧದಾಗ ಮೈ ತಿರುವಾಕ ಸಿದ್ಧಿಲ್ಲ... ಅಂತ ಸಮಾಧಾನಿಸಿಕೊಂಡಳು. ಹಂಗ್ಯಾಕ ಗಾಬರಿ ಬೀಳ್ತೀರಿ? ನಿದ್ದಿ ಸರ್ಯಾಗಿಲ್ಲ. ಎಲ್ಲೋ ಜೋಲಿ ಹೋದ್ಹಾಂಗಾಗಿರಬೇಕು. ಅಂವ, 'ಮನಿ ನಂದು ಬಿಟ್ಟ ನಡ್ರೀ ಅತ್ತಾಗ' ಅಂತ ಡೌಲ ಮಾಡಿದ್ರ ಮಾಡ್ಕೋವಲ್ಲನ್ಯಾಕ. ನಮ್ಮದಾರಿ ನಾವ್ ಸವಿಸೋಣು. ಅಂತ ತಾನೇ ಸಮಾಧಾನಿಸಿದಳು. 'ಶಾಂಕರಿ, ಈ ಹಾಳು ಕೊರೊನಾಕ್ಕ ಅಂವ ನೌಕರಿ ಬಿಟ್ಟ ಬರೂಹಾಂಗಾಗಿ ಏನೆಲ್ಲ ಆತ ನೋಡವಾ' ಅಂತ ಶಿವರಾಯ ಮಾಸ್ತರು ಬಾಯೊಡೆದರಾದರೂ, ಓಣಿ ಮಂದೀ ಮುಂದ, ಮತ್ತ ಟಂ ಟಂ ಗಾಡೀಲಿ ಗಂಟ ಹೇರ್ಕಂಡು ಹೊರಬೀಳೂ ಹಾಂಗಾತಲ್ಲ – ಅಂತ ಉಗುಳು ನುಂಗಿದರು. ಮಂಚ ಇಲ್ಲೇ ಬಿಟ್ಟ ಹೊಂಡೂದಾದ್ರ ನಾ ಹ್ಯಾಂಗ ಕೂಡೂದು ಏಳೂದು ಅಂತ ಅವ್ವ ಗಾಬರಿಯಾಗಿದ್ದಳು. ದಿನಾ ದೇವರ ಮನಿ ನೋಡ್ಕೋತಿದ್ದ ಸಂಧ್ಯಾಗ ದೇವ್ರಾ ತಕೊಂತಾರೋ, ಅಲ್ಲಿ ಹೊಸಾ ದೇವ್ರ ತರ್ತಾರೋ, ತಿಳೀದೆ ಗರ್ಕಾಗಿತ್ತು. ಮಧು ತನ್ನ ಬೆಕ್ಕಿನಮರಿ ಒಯ್ಯೂದ ಹ್ಯಾಂಗಪಾ? ಅಂತ ದಿಗಿಲುಬಿದ್ದಿದ್ದಳು. ಶಂಕರಿ, ಥೂ ಲಜ್ಜಿಲ್ಲದವ್ನ, ಎಷ್ಟ ಮನಿ ಗುಡ್ಸಾಕ ಹಚ್ಚೀ ಹಚ್ಚಪಾ ಅಂತ ತನ್ನ ಪ್ರೀತಿಯ ಸೋಮೇಶ್ವರನ ಹತ್ರ ಜಗಳ ಕಾಯ್ತಿದ್ದಳು. ಹೊರಗೆ ಟಂ ಟಂ ಗಾಡಿಯ ಹಾರ್ನ್ ಕೇಳ್ತಿದ್ದ ಹಾಗೆ, ಮಾಸ್ತರು ದಿಢೀರನೆ ತಮ್ಮ ವಯಸ್ಸಿನ ಲೆಕ್ಕ ತಪ್ಪಿದವರ ಹಾಗೆ, ಹುರುಪಲೇ, 'ಏರಾ ಏರಿ ಅಂಬರದಾಗ ನೇಸರ ನಗತಾನ...' ಅಂತ ತುಸು ಜೋರಾಗಿಯೇ ಹಾಡಿಕೋತ ಸಂಧ್ಯಾಳ ಜೋಡಿ ಚೀಲಾ ಸಾಮಾನು ಎತ್ತೆತ್ತಿ ಗಾಡಿಗೆ ಹಾಕತೊಡಗಿದರು. ಒಳಗೆ ಮಧು, ಮನೆಯ ಮೂಲಿ ಮೂಲಿ ಸಂದಿ–ಗೊಂದಿ ಹೊಕ್ಕು ತಪರಾಡಿಸುತ್ತಿದ್ದ ಬೆಕ್ಕಿನ ಮರಿ ಹಿಡಿಯಲು ಗೋಣಿ ಚೀಲ ಹಿಡಿದು ಬೆನ್ನುಹತ್ತಿದ್ದಳು.


## ವಿನಯಾ ಒಕ್ಕುಂದ

ಸರ್ಕಾರಿ ಕಾಲೇಜಿನ ಅಧ್ಯಾಪಕಿ ವಿನಯಾ ಧಾರವಾಡದಲ್ಲಿ ನೆಲೆಸಿದ್ದಾರೆ. ಸಮಕಾಲೀನ ವಿದ್ಯಮಾನಗಳನ್ನು ಸ್ತ್ರೀ ನೋಟದ ಮೂಲಕ ಸೂಕ್ಷ್ಮವಾಗಿ ಚಿತ್ರಿಸುವ ಅವರು, 'ಬಾಯಾರಿಕೆ', 'ನೂರು ಗೋರಿಯ ದೀಪ', 'ಹಸಬಿ' ಎಂಬ ಕವಿತೆಯ ಸಂಗ್ರಹಗಳನ್ನು, 'ಊರ ಒಳಗಣ ಬಯಲು', 'ಉರಿ' ಎಂಬ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ.